MARCH 28, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ತಲಾ ಆದಾಯ ಹಾಗೂ ಜೀವನ ಶೈಲಿಯಲ್ಲಿ, ಕರ್ನಾಟಕ ರಾಜ್ಯ, ದೇಶದಲ್ಲೇ ಮುಂಚೂಣಿ – ಆರ್. ವಿಶಾಲ.**
- **ಕೃಷಿ ನವೋದ್ಯಮ ಸ್ಥಾಪನೆಯಲ್ಲಿ, ಕರ್ನಾಟಕ, ದೇಶಕ್ಕೆ ಎರಡನೇ ಸ್ಥಾನದಲ್ಲಿದೆ – ನಾರಾಯಣ ಸುರೇಶ.**
- **ತಾಪಮಾನದ ಏರುಪೇರು; ರಾಜ್ಯಾದ್ಯಂತ ಸಂಕಷ್ಟಕ್ಕೀಡಾದ, ಜೇನು ಕೃಷಿ.**
- **ಲಿಂಡೌ, ನೊಬೆಲ್ ಪುರಸ್ಕೃತ, ರಸಾಯನಶಾಸ್ತ್ರಜ್ಞರ ಸಭೆ; ಬಳ್ಳಾರಿಯ ಗೌತಮಿ ಪಾಟೀಲ ಹಾಗೂ ನಸೀಮ್ ಕೌಸರ್, ಆಯ್ಕೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಸ್ತುತ ಕರ್ನಾಟಕ ರಾಜ್ಯ, ಉತ್ತಮ ತಲಾ ಆದಾಯ ಹಾಗೂ ಗುಣಮಟ್ಟದ ಜೀವನ ಶೈಲಿಯಿಂದ, ದೇಶದಲ್ಲಿ ಮುಂಚೂಣಿಯಲ್ಲಿದೆ ಎಂದು, ಹಣಕಾಸು ಇಲಾಖೆ ಕಾರ್ಯದರ್ಶಿ ಡಾಕ್ಟರ್ ಆರ್. ವಿಶಾಲ ಹೇಳಿದ್ದಾರೆ. ಧಾರವಾಡದ, ಸೆಂಟರ್ ಫಾರ್ ಮಲ್ಟಿಡಿಸಿಪ್ಲಿನರಿ ಡೆವಲಪ್ಮೆಂಟ್ ರಿಸರ್ಚ್ ಆಯೋಜಿಸಿರುವ, ಎರಡು ದಿನಗಳ, ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಡಿ.ಎಂ.ನಂಜುಂಡಪ್ಪ ಹಾಗೂ ಗೋವಿಂದರಾವ್ ಅವರ ವರದಿಗಳನ್ನಾಧರಿಸಿ, ಪ್ರಾದೇಶಿಕ ಅಸಮತೋಲನ ನಿವಾರಿಸಿ, ಸುಸ್ಥಿರ ಅಭಿವೃದ್ಧಿ ಸಾಧಿಸಲು, ಅನೇಕ ಯೋಜನೆಗಳನ್ನು ರೂಪಿಸಲಾಗಿದೆ ಎಂದರು.**

<><><>

**ಅಧ್ಯಕ್ಷತೆ ವಹಿಸಿದ್ದ ಸಿ.ಎಂ.ಡಿ.ಆರ್. ಕಾರ್ಯಾಧ್ಯಕ್ಷ ಕೈಲಾಸ್ ಚಂದ್ರ ಶರ್ಮಾ ಮಾತನಾಡಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದಿಂದ, ಕೌಶಲಯುತ ಶಿಕ್ಷಣ, ಔದ್ಯಮಿಕ ಬೆಳವಣಿಗೆಗೆ ಹೊಸ ರೂಪ ನೀಡಿದೆ. ಜ್ಞಾನ ಆಧಾರಿತ, ಬಹು ಶಿಸ್ತೀಯ ಶಿಕ್ಷಣ ವ್ಯವಸ್ಥೆ ಉಪಯುಕ್ತವಾಗಿದೆ ಎಂದು, ನುಡಿದರು.**

<><><>

ಕರ್ನಾಟಕ ರಾಜ್ಯ, ದೇಶದಲ್ಲೇ ಕೃಷಿ ನವೋದ್ಯಮ ಸ್ಥಾಪನೆ ಮತ್ತು ಅನುಷ್ಠಾನದಲ್ಲಿ, ಎರಡನೇ ಸ್ಥಾನದಲ್ಲಿದೆ. ಶೇಕಡ 30 ರಷ್ಟು ಜೈವಿಕ ಆರ್ಥಿಕತೆಯನ್ನು ಒದಗಿಸುತ್ತಿದೆ ಎಂದು, ಬೆಂಗಳೂರಿನ ಜೈವಿಕ ವಿಜ್ಞಾನ ನವೋದ್ಯಮಗಳ ಸಂಘದ ಮುಖ್ಯಸ್ಥ ನಾರಾಯಣ ಸುರೇಶ್ ತಿಳಿಸಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ, "ಭವಿಷ್ಯಕ್ಕಾಗಿ ಕೃಷಿ ಉದ್ದಿಮೆಯಲ್ಲಿ ನಾವಿನ್ಯತೆ ಮತ್ತು ಉದ್ಯಮಶೀಲತೆ" ಕಾರ್ಯಗಾರವನ್ನು ಉದ್ಘಾಟಿಸಿ, ಮಾತನಾಡಿದರು. ಹವಾಮಾನ ವೈಪರಿತ್ಯ ನಿರ್ವಹಣೆ ರೈತರಿಗೆ ಅತಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕೃಷಿ ನವೋದ್ಯಮಗಳು ರೈತರ ನಷ್ಟದ ಪ್ರಮಾಣ ತಗ್ಗಿಸಿ, ಹೆಚ್ಚಿನ ಆದಾಯ ಕಲ್ಪಿಸಲು, ನವೀನ ತಾಂತ್ರಿಕತೆ ಮೂಲಕ ನೆರವಾಗಲಿವೆ, ಎಂದರು. ಕಾರ್ಯಾಗಾರದಲ್ಲಿ 250ಕ್ಕೂ ಹೆಚ್ಚು ಕೃಷಿ ನವೋದ್ಯಮಿಗಳು ಭಾಗವಹಿಸಿದ್ದರು.

<><><>

ತಾಪಮಾನ ಸತತ ಏರು ಗತಿಯಲ್ಲಿರುವ ಕಾರಣ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ, ಜೇನು ಕೃಷಿಕರು ಸಾಕಿದ, 'ಎಪಿಸ್ ಸೆರೆನಾ ಇಂಡಿಕಾ' ಕುಟುಂಬಗಳು, ಪೆಟ್ಟಿಗೆಯಿಂದ ಹಾರಿ ಹೋಗಿ, ತೋಟಗಳಲ್ಲಿ ಸಕಾಲಿಕ ಪರಾಗ ಸ್ಪರ್ಷಕ್ಕೆ ಅನುವಾಗದೇ, ಸಂಕಷ್ಟಕ್ಕೆ ಈಡಾಗಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕಿನ, ಸಜೀಪಮೂಡ ನಿವಾಸಿ, ಪದ್ಯಾಣ ಲಕ್ಷ್ಮೀನಾರಾಯಣ ಭಟ್ ಅವರು, ಹಣ್ಣಿನ ಕೃಷಿಯಲ್ಲಿ ತುಂಬ ಪ್ರಯೋಗಶೀಲರು. ಪ್ರದೇಶ ಸಮಾಚಾರಕ್ಕಾಗಿ, ಪ್ರಸ್ತುತ ತಮ್ಮ ಜೇನು ಸಾಕಣೆ ಅನುಭವವನ್ನು, ಪ್ರದೇಶ ಸಮಾಚಾರಕ್ಕಾಗಿ ಹಂಚಿಕೊಂಡಿದ್ದಾರೆ.

<><><>

ಪದ್ಯಾಣ ಲಕ್ಷ್ಮೀನಾರಾಯಣ ಭಟ್ ಧ್ವನಿ 50 ಸೆಕೆಂದುಗಳು

<><><>

ವಸಂತ ಮಾಸದ ಹಿನ್ನೆಲೆ, ಜೇನುಗಳ ಸಂಖ್ಯೆ ವೃದ್ಧಿಸಿ, ಜೇನು ಕೃಷಿಗೆ ಈಗ ಸಮೃದ್ಧಿಯ ಕಾಲವಾಗಬೇಕಿತ್ತು. ಸದ್ಯ ಇರುವ ಜೇನು ಕುಟುಂಬ ಉಳಿಸಿಕೊಳ್ಳಲು, ಮುಂಜಾಗ್ರತೆ ಅವಶ್ಯಕ ಎನ್ನುತ್ತಾರೆ, ಹಿರಿಯ ಜೇನು ಕೃಷಿ ತರಬೇತುದಾರ, ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿಯ ಎಂ. ವೆಂಕಟೇಶ.

<><><>

ಎಂ.ವೆಂಕಟೇಶ ಧ್ವನಿ 50 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಕುಮಟಾದ, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, 10 ದಿನಗಳ ಜೇನು ಸಾಕಾಣಿಕೆ ಉಚಿತ ತರಬೇತಿಗೆ, ಅರ್ಜಿ ಆಹ್ವಾನಿಸಿದೆ. ಏಪ್ರಿಲ್ 2ರ ವರೆಗೆ, ಅವಕಾಶವಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಜರ್ಮನಿಯ ಲಿಂಡೌ ನಲ್ಲಿ, ಜೂನ್ 29 ರಿಂದ ಜುಲೈ 4ರ ವರೆಗೆ, 74ನೇ ಅಂತಾರಾಷ್ಟ್ರೀಯ ಲಿಂಡೌ ರಸಾಯನಶಾಸ್ತ್ರ ನೊಬೆಲ್ ಪುರಸ್ಕೃತರ ದುಂಡು ಮೇಜಿನ ಸಭೆ ನಡೆಯಲಿದೆ.  ಬಳ್ಳಾರಿಯ ವಿಜಯನಗರ ಶ್ರೀ ಕೃ ಷ್ಣದೇವರಾಯ ವಿಶ್ವವಿದ್ಯಾಲಯದ, ರಸಾಯನಶಾಸ್ತ್ರ ವಿಭಾಗದ, ಸಂಶೋಧನಾ ವಿದ್ಯಾರ್ಥಿಗಳಾದ, ಗೌತಮಿ ಪಾಟೀಲ್ ಹಾಗೂ ನಸೀಮ್ ಕೌಸರ್, ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ದೇಶಾದ್ಯಂತ ಆಯ್ಕೆ ಮಾಡಿದ, ಒಟ್ಟು 29 ಯುವ ವಿಜ್ಞಾನಿಗಳ ಪೈಕಿ, ಬಳ್ಳಾರಿಯ ಈ ಇಬ್ಬರು ಪ್ರತಿಭಾವಂತರು ಸ್ಥಾನ ಪಡೆದಿದ್ದಾರೆ. ಉಪ ಕುಲಪತಿ ಎಂ ಮುನಿರಾಜು, ಕುಲ ಸಚಿವ ಎಸ್.ಎನ್. ರುದ್ರೇಶ್ ಶುಭ ಹಾರೈಸಿದ್ದಾರೆ.

<><><>

ವಿಜಯಪುರ ಜಿಲ್ಲೆ, 'ಇಂಡಿ'ಯ ಬಬಲಾದ ಗ್ರಾಮದ, 'ಒಡಲ ಧ್ವನಿ ಮಹಿಳಾ ಒಕ್ಕೂಟದ' ಸದಸ್ಯರು, ಪ್ರತಿ ದಿನ ಸಾವಿರ ಶೇಂಗಾ ಹೋಳಿಗೆ, ಶೇಂಗಾ ಚಟ್ನಿ ಹಾಗೂ ಸಜ್ಜೆ ರೊಟ್ಟಿಯನ್ನು ಬೆಂಗಳೂರಿಗೆ ಪೂರೈಸಿ, ತಿಂಗಳಿಗೆ 20 ಸಾವಿರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. ರಾಜ್ಯ ಸರ್ಕಾರದ, ಮಹತ್ವಾಕಾಂಕ್ಷಿ ಪಂಚ ಖಾತ್ರಿ ಯೋಜನೆಗಳಲ್ಲಿ ಒಂದಾದ, 'ಸ್ತ್ರೀ ಶಕ್ತಿ ಯೋಜನೆ' ಅಡಿ, ಉಚಿತ ಬಸ್ ಪ್ರಯಾಣದ ಅವಕಾಶವನ್ನು, ಅವರು ಸದ್ಬಳಕೆ ಮಾಡಿಕೊಂಡು, ಆರ್ಥಿಕ ಸ್ವಾವಲಂಬನೆಯತ್ತ ದೃಢ ಹೆಜ್ಜೆ ಇಟ್ಟಿದ್ದಾರೆ. ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, ಸ್ವಸಹಾಯ ಸಂಘದ ಮಹಿಳೆಯರನ್ನು ಅಭಿನಂದಿಸಿದ್ದಾರೆ.

<><><>

ಕೊಡಗಿನ ಪಾಂಡಂಡ ಕುಟ್ಟಪ್ಪ ಅವರು, ಕರಡ ಗ್ರಾಮದಲ್ಲಿ ಪ್ರಾರಂಭಿಸಿದ, ಕೊಡವರ ಕೌಟುಂಬಿಕ ಹಾಕಿ ಪಂದ್ಯಾವಳಿಗೆ, ಈಗ ಬೆಳ್ಳಿ ಹಬ್ಬದ ಸಂಭ್ರಮ. ಮುದ್ದಂಡ ಕುಟುಂಬಸ್ಥರ ಆತಿಥ್ಯದಲ್ಲಿ, ಇಂದು ಮಧ್ಯಾಹ್ನ 12 ಗಂಟೆಗೆ ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿ, ಹಾಕಿ ಪಂದ್ಯಾವಳಿಗೆ ಚಾಲನೆ ದೊರಕಲಿದೆ. ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ, ಒಟ್ಟು 3 ಮೈದಾನಗಳಲ್ಲಿ, ಒಂದು ತಿಂಗಳ ಕಾಲ, ಕೊಡವರ 390 ಕುಟುಂಬಗಳು ಸೇರಿದಂತೆ, 40 ಮಹಿಳಾ ತಂಡಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ತಾರಾ ಹಾಕಿ ಪಟುಗಳು, ಈ ಪಂದ್ಯಾವಳಿಯ ಮೆರಗು ಹೆಚ್ಚಿಸಲಿದ್ದಾರೆ.

<><><>

ಏಪ್ರಿಲ್ 27 ರಂದು ಮುಕ್ತಾಯಗೊಳ್ಳುವ ಹಾಕಿ ಪಂದ್ಯದಲ್ಲಿ, ವಿಜೇತ ತಂಡಕ್ಕೆ 5 ಲಕ್ಷ ರೂಪಾಯಿ ಬಹುಮಾನ ನೀಡಲಾಗುತ್ತಿದೆ.

<><><>

ರಾಯಚೂರಿನಲ್ಲಿ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – ಏಮ್ಸ್ ಘಟಕ ಸ್ಥಾಪನೆಗೆ, ಕೇಂದ್ರ ಸರ್ಕಾರ, ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಘೋಷಿಸುವಂತೆ, ಉಪಮುಖ್ಯಮಂತ್ರಿ  ಡಿ.ಕೆ. ಶಿವಕುಮಾರ ಮನವಿ ಮಾಡಿದ್ದಾರೆ. ಹೊಸ ದಿಲ್ಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಮ್ಸ್ ಸ್ಥಾಪಿಸಲು ಅಗತ್ಯವಿರುವ ಜಮೀನು ಒದಗಿಸಲು, ರಾಜ್ಯ ಸರ್ಕಾರ ಸಿದ್ಧ; ಪ್ರಸ್ತಾವ ಕೂಡ ಸಲ್ಲಿಸಲಾಗಿದೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲೂಕು, ಬಣಕಲ್ ಗ್ರಾಮದ ಬಳಿ, ಹೇಮಾವತಿ ನದಿಗೆ ವಿಷ ಸೇರ್ಪಡೆಯಾಗಿ, ಸಾವಿರಾರು ಮೀನುಗಳು ಸಾವನಪ್ಪಿ, ಎರಡು ಕಿಲೋ ಮೀಟರ್ ಉದ್ದ, ದಂಡೆಗುಂಟ ತೇಲುತ್ತಿವೆ. ಹಾಸನ ಜಿಲ್ಲೆ, ಗೊರೂರು ಜಲಾಶಯಕ್ಕೆ ಈ ನದಿ ಸೇರುತ್ತದೆ.

<><><>

ಕೃಷ್ಣ ನದಿಯಿಂದ, ಎರಡೂವರೆ ಟಿ.ಎಂ.ಸಿ. ನೀರನ್ನು ಬಳಸಿಕೊಂಡು, ವಿಜಯಪುರ ಜಿಲ್ಲೆ, ತಿಕೋಟಾ ತಾಲೂಕಿನ ಎರಡು ಕಡೆ, ಜಲ ಸಂಗ್ರಹಾಲಯ ನಿರ್ಮಿಸಲಾಗುವುದು ಎಂದು, ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

<><><>

'ಶಾಂತಿಯ ಸಂಸ್ಕೃತಿಗಾಗಿ ರಂಗಭೂಮಿ', ಧ್ಯೇಯದೊಂದಿಗೆ, ವಿಶ್ವ ರಂಗಭೂಮಿ ದಿನ ಆಚರಿಸಿದ ವರದಿಗಳು ಬಂದಿವೆ.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ, ಶಾಮ್ ಭಟ್ ಅವರು, ಚಿತ್ರದುರ್ಗ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆಯ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ, ರೈತರ ಮಕ್ಕಳಿಗೆ, 10 ತಿಂಗಳ ತರಬೇತಿಯನ್ನು, ಆಯೋಜಿಸಲಾಗಿದೆ. ಏಪ್ರಿಲ್ 1 ಅರ್ಜಿ ಸಲ್ಲಿಸಲು ಕೊನೆ ದಿನ.

<><><>

ಯುಗಾದಿ ಹಾಗೂ ರಂಜಾನ್ ಹಬ್ಬದ ಹಿನ್ನೆಲೆ, ರಾಜ್ಯ ರಸ್ತೆ ಸಾರಿಗೆ ನಿಗಮ, 2 ಸಾವಿರ ಹೆಚ್ಚುವರಿ ಬಸ್ಸುಗಳ ವ್ಯವಸ್ಥೆ ಮಾಡಿದೆ. ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ, ಇಂದಿನಿಂದ 30ರ ವರೆಗೆ ವಿಶೇ ’ ಸಾರಿಗೆ ಲಭ್ಯವಿದ್ದು, ಮುಂಗಡ ಬುಕ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ.

<><><>

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ, ಸಹಕಾರಿಗಳು ನೋಂದಾಯಿಸಲು ಹಾಗೂ ನವೀಕರಿಸಲು, ಈ ತಿಂಗಳ 31ರ ವರೆಗೆ ಅವಕಾಶ ಕಲ್ಪಿಸಿದ್ದಾಗಿ, ಸಹಕಾರ ಸಂಘಗಳ ನಿಬಂಧಕರು ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ತಲಾ ಆದಾಯ ಹಾಗೂ ಜೀವನ ಶೈಲಿಯಲ್ಲಿ, ಕರ್ನಾಟಕ ರಾಜ್ಯ, ದೇಶದಲ್ಲೇ ಮುಂಚೂಣಿ – ಆರ್. ವಿಶಾಲ.
- ಕೃಷಿ ನವೋದ್ಯಮ ಸ್ಥಾಪನೆಯಲ್ಲಿ, ಕರ್ನಾಟಕ, ದೇಶಕ್ಕೆ ಎರಡನೇ ಸ್ಥಾನದಲ್ಲಿದೆ – ನಾರಾಯಣ ಸುರೇಶ.
- ತಾಪಮಾನದ ಏರುಪೇರು; ರಾಜ್ಯಾದ್ಯಂತ ಸಂಕಷ್ಟಕ್ಕೀಡಾದ, ಜೇನು ಕೃಷಿ.
- ಲಿಂಡೌ, ನೊಬೆಲ್ ಪುರಸ್ಕೃತ, ರಸಾಯನಶಾಸ್ತ್ರಜ್ಞರ ಸಭೆ; ಬಳ್ಳಾರಿಯ ಗೌತಮಿ ಪಾಟೀಲ ಹಾಗೂ ನಸೀಮ್ ಕೌಸರ್, ಆಯ್ಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>